# ಶ್ರೀಮಾತೆಯವರ ಪದತಲದಲ್ಲಿ

**ಸ್ವಾಮಿ ವೀರೇಶ್ವರಾನಂದ**

೧೯೧೬ರ ಬೇಸಿಗೆಯ ಮಧ್ಯಭಾಗದಲ್ಲಿ ನಾನು ಮೊತ್ತ ಮೊದಲ ಬಾರಿಗೆ ಬೇಲೂರು ಮಠಕ್ಕೆ ಹೋದೆ. ಅಲ್ಲಿ ಸುಮಾರು ಎರಡು ತಿಂಗಳ ಕಾಲ ತಂಗಿದ್ದೆ. ಅನಂತರವೇ ನಾನು ಶ್ರೀಮಾತೆಯವರನ್ನು ಭೇಟಿಯಾಗಲು ಜಯರಾಮಬಾಟಿಗೆ ಹೋದುದು. ನನಗೆ ನೆನಪಿರುವಂತೆ, ನಾನು ಜಯರಾಮ ಬಾಟಿಗೆ ಹೋದುದು ಜೂನ್ ತಿಂಗಳಲ್ಲಿ. ಅಲ್ಲಿಗೆ ಹೊರಟಿದ್ದ ಒಬ್ಬ ವ್ಯಕ್ತಿಗೆ ಸ್ವಾಮಿ ಪ್ರೇಮಾನಂದರು ನನ್ನನ್ನು ಪರಿಚಯಿಸಿ ಕೊಟ್ಟರು. ಅವರು ಶ್ರೀಮಾತೆಯವರಿಗೆ ಒಂದು ಪರಿಚಯ ಪತ್ರವನ್ನೂ ಕೊಟ್ಟರು. ನಾವಿಬ್ಬರೂ ಜಯರಾಮಬಾಟಿಗೆ ಹೊರಟೆವು. ಹೌರಾ ಮೈದಾನ ಮಾರ್ಟಿನ್ ಕಂಪೆನಿ ರೈಲ್ವೇ ಸ್ಟೇಶನ್ನಿಗೆ ಹೋಗಿ, ಅಲ್ಲಿಂದ ರೈಲಿನಲ್ಲಿ ಚಾಪಾದಂಗಾ ವರೆಗೆ ಹೋದೆವು. ಅದು ಎಷ್ಟು ದೂರವಿತ್ತೆಂದು ಸರಿಯಾಗಿ ನನಗೆ ತಿಳಿಯದು. ಏನೇ ಇರಲಿ, ಮಧ್ಯಾಹ್ನ ಸುಮಾರು ೩ ಅಥವಾ ೩:೩೦ಕ್ಕೆ ಹೊರಟು, ರಾತ್ರಿ ಸುಮಾರು ೮:೩೦ರ ಹೊತ್ತಿಗೆ ನಾವು ಚಾಪಾದಂಗಾ ತಲುಪಿದ್ದೆವು. ಮಾರ್ಟಿನ್ ಕಂಪೆನಿ ರೈಲು ತುಂಬಾ ನಿಧಾನವಾಗಿ ಸಾಗುತ್ತಿತ್ತು – ಟ್ರಾಮ್‌ನಷ್ಟೇ ವೇಗ, ಅಥವಾ ಅದಕ್ಕಿಂತಲೂ ನಿಧಾನ. ಅದೇ ರೈಲಿನಲ್ಲಿ ಇನ್ನಿಬ್ಬರು ತರುಣರು ಪ್ರಯಾಣ ಮಾಡಿದ್ದರು; ಅವರು ನಮ್ಮನ್ನು ಚಾಪಾದಂಗಾದಲ್ಲಿ ಭೇಟಿ ಮಾಡಿದರು. ನಾವೆಲ್ಲರೂ ಅಂದು ರಾತ್ರಿಯನ್ನು ಚಾಪಾದಂಗಾ ರೈಲ್ವೇ ಸ್ಟೇಶನ್ನಿನಲ್ಲಿ ಕಳೆದೆವು. ಅದು ಒಂದು ಕೋಣೆ; ಅದಕ್ಕೂ ಅರ್ಧದಷ್ಟು ಮಾತ್ರ ಚಾವಣಿಯಿತ್ತು. ಮರುದಿನ ಬೆಳಿಗ್ಗೆ ನಾವು ಅಲ್ಲಿಂದ ಜಯರಾಮಬಾಟಿಗೆ ಹೊರಟೆವು. ನಾವು ಸ್ವಲ್ಪ ದೂರ ಹೋಗುವಷ್ಟರಲ್ಲಿ ನಮ್ಮ ಜೊತೆಗೆ ಇದ್ದ ಕಲ್ಕತ್ತೆಯ ಸ್ನೇಹಿತರಲ್ಲಿ ಒಬ್ಬನಿಗೆ ಕಾಯಿಲೆ ಉಂಟಾಯಿತು. ಅವನಿಗೆ ಭೇದಿ ಆರಂಭವಾಯಿತು; ಅವನ ಕಲ್ಕತ್ತೆಯ ಸ್ನೇಹಿತ ಅವನಿಗಾಗಿ ಒಂದು ಎತ್ತಿನ ಗಾಡಿಯನ್ನು ಗೊತ್ತು ಮಾಡಿದ. ಆದರೆ ಅವನಿಗೆ ಭೇದಿ ಹೆಚ್ಚುತ್ತಲೇ ಹೋದದ್ದರಿಂದ, ಅವರಿಬ್ಬರೂ ಕಲ್ಕತ್ತೆಗೆ ಮರಳಿ ಹೋದರು. ಮುಂದೆ ಈ ಇಬ್ಬರೂ ಸ್ನೇಹಿತರು ರಾಮಕೃಷ್ಣ ಮಹಾಸಂಘವನ್ನು ಸೇರಿ ಸಂನ್ಯಾಸಿಗಳಾದರು. ಕಾಯಿಲೆ ಬಿದ್ದ ತರುಣನೇ ಮುಂದೆ ಸ್ವಾಮಿ ಸತ್ಪ್ರಕಾಶಾನಂದರೆಂದು ಪ್ರಸಿದ್ಧರಾದರು. ಅವರು ಅಮೆರಿಕದ ಸೇಂಟ್ ಲೂಯಿಸ್ ಕೇಂದ್ರದ ಅಧ್ಯಕ್ಷರಾಗಿ ಅನೇಕ ವರ್ಷ ಸೇವೆ ಸಲ್ಲಿಸಿದರು. ಇನ್ನೊಬ್ಬ ತರುಣನೇ ಶಾರದೇಂದು ಮಹಾರಾಜ್, ಮುಂದೆ ಸ್ವಾಮಿ ವಿಶ್ವನಾಥನಂದರಾದರು. ಅವರು ದೆಹಲಿ ಆಶ್ರಮದ ಆರಂಭದ ದಿನಗಳಲ್ಲಿ, ಹಲವು ವರ್ಷ ಇದ್ದರು. ಅವರು ಒಳ್ಳೆಯ ಸಂಗೀತಗಾರರು ಕೂಡ. ಇಬ್ಬರೂ ಈಗ ಕಾಲವಾಗಿದ್ದಾರೆ.

ನಾವಿಬ್ಬರೂ (ಅಂದರೆ ಬೇಲೂರು ಮಠದಿಂದ ಹೊರಟವರು, ನಾನು ಮತ್ತು ಇನ್ನೊಬ್ಬರು ಭಕ್ತರು) ಶ್ರೀಮಾತೆಯವರ ಮನೆಗೆ ನಮ್ಮ ಪ್ರಯಾಣವನ್ನು ಮುಂದುವರಿಸಿದೆವು. ನಾವು ಮತ್ತೆ ಆರಂಭಿಸಿದಾಗ ತಡವಾಗಿತ್ತು; ಆದ್ದರಿಂದ ಎಷ್ಟು ದೂರ ಎಂದು ಖಚಿತವಾಗಿ ನನಗೆ ತಿಳಿಯದು. ನಮ್ಮ ಜೊತೆಗೆ ಪ್ರಯಾಣ ಮಾಡುತ್ತಿದ್ದವರು ಅನಾರೋಗ್ಯದ ನಿಮಿತ್ತ ಕಲ್ಕತ್ತೆಗೆ ಹಿಂದಿರುಗಿದ್ದರಿಂದ ನಮ್ಮ ಪ್ರಯಾಣ ತಡವಾಯಿತು. ನಾವು ಆರಾಂಬಾಗ್ ನದಿಯನ್ನು ತಲುಪುವಷ್ಟರಲ್ಲಿ ರಾತ್ರಿಯಾಗಿತ್ತು. ಆದ್ದರಿಂದ ಕಾಮಾರಪುಕುರದ ಕಡೆಗೆ ಹೋಗಲಾಗಲಿಲ್ಲ. ಅಂದು ರಾತ್ರಿ ನಾವು ನದೀತೀರದಲ್ಲೇ ಕಳೆದೆವು. ಬೇಸಿಗೆಯಾಗಿದ್ದರೂ ರಾತ್ರಿ ಹೊತ್ತು ತುಂಬಾ ಚಳಿಯಿತ್ತು. ನಮ್ಮೊಂದಿಗೆ ಇತರರೂ ಇದ್ದರು — ಗಾಡಿಯವರೂ ಕೂಡ. ಬೆಳಿಗ್ಗೆ ಬೇಗನೆ ಎದ್ದು, ನಾವು ಕಾಮಾರಪುಕುರಕ್ಕೆ ಹೊರಟೆವು. ಅಲ್ಲಿಗೆ ತಲುಪಿದ ನಂತರ ನಾವು ಮೊದಲು ಭೇಟಿಯಾದದ್ದೇ ಶಿವುದಾ ಅವರನ್ನು. ಆಗ ಅವರು ಹುಕ್ಕಾ ಸೇದುತ್ತಿದ್ದರು. ನಾವು 'ಸ್ವಾಗತ ಕೋಣೆ'ಯಲ್ಲಿ ಕಾಯಬೇಕಾಯಿತು. ಅನಂತರ ಅವರು ಒಳಗೆ ಹೋಗಿ ನಮ್ಮ ಊಟಕ್ಕೆ ವ್ಯವಸ್ಥೆ ಮಾಡಿದರು. ಮಧ್ಯಾಹ್ನ ಊಟವಾದ ಬಳಿಕ ನಾವು ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು, ಜಯರಾಮಬಾಟಿಗೆ ಹೊರಟೆವು. ನಾವು ಜಯರಾಮಬಾಟಿ ತಲುಪಿದಾಗ ಸಂಜೆ ೪-೪:೩೦ ಹೊತ್ತು. ಶ್ರೀಮಾತೆಯವರ ಭೇಟಿಗಾಗಿ ನಮ್ಮನ್ನು ಕರೆದುಕೊಂಡು ಹೋದರು. ನಾವು ಶ್ರೀಮಾತೆಯವರ ಮನೆಯೊಳಕ್ಕೆ ಹೋದೆವು. ಈಗ ಶ್ರೀಮಾತೆಯವರ ಹೊಸ ಮನೆಯೆಂದೇ ಕರೆಯುವ ಮನೆಯಲ್ಲಿ ನಾವು ತಂಗಿದೆವು. ಆಗ ಅದು ಮನೆಯ ಹೊರಭಾಗದ ಬೈಠಕ್‌ಖಾನೆಯಾಗಿತ್ತು. ಆಗಿನ್ನೂ ಹೊಸ ಮನೆ ನಿರ್ಮಾಣ ಹಂತದಲ್ಲಿತ್ತು. ಶ್ರೀಮಾತೆಯವರ ಭೇಟಿಗಾಗಿ ನಮ್ಮನ್ನು ಕರೆದುಕೊಂಡು ಹೋದಾಗ, ಅವರು ತಮ್ಮ ಹಳೆಯ ಮನೆಯಲ್ಲಿ ಕುಳಿತಿದ್ದರು. ಆಗ ಅಲ್ಲಿ ಬೇರೆ ಯಾರೂ ಇರಲಿಲ್ಲ. ಬಹುಶಃ ಪುರುಷರು ಬರುತ್ತಿದ್ದಾರೆಂದು ಅಲ್ಲಿದ್ದ ಹೆಂಗಸರೆಲ್ಲ ಹೊರಟು ಹೋಗಿರಬೇಕು. ವರಾಂಡದಲ್ಲಿ ಕುಳಿತಿದ್ದ ಶ್ರೀಮಾತೆಯವರು ರಾತ್ರಿಯ ಅಡುಗೆಗೋಸ್ಕರ ತರಕಾರಿ ಹೆಚ್ಚು

---

* ಇದು ನವದೆಹಲಿಯ ರಾಮಕೃಷ್ಣ ಮಿಷನ್ನಿನಲ್ಲಿ ೧೯೮೧ರ ಡಿಸೆಂಬರ್ ೧೪ರಂದು ನೀಡಿದ ಭಾಷಣ. ಇದರಲ್ಲಿ ಲೇಖಕರ ನೆನಪುಗಳು ಹಾಗೂ ಇತರ ಆಕರಗಳಿಂದ ಸಂಗ್ರಹಿಸಿದ ವಿಷಯಗಳು ಅಡಕವಾಗಿವೆ. ಆಂಗ್ಲಭಾಷೆಯ 'Sri Sarada Devi: The Great Wonder' ಎಂಬ ಗ್ರಂಥದಲ್ಲಿ ಪ್ರಕಟವಾದ ಈ ಲೇಖನದ ಬಂಗಾಳಿ ಅನುವಾದವನ್ನು '**ಶ್ರೀ ಶ್ರೀ ಮಾಯೇರ್ ಪದಪ್ರಾಂತೇ**' ಗ್ರಂಥದ ಮೊದಲನೆಯ ಸಂಪುಟದಲ್ಲಿ ಪ್ರಕಟಿಸಲಾಗಿದೆ. ಪ್ರಸ್ತುತ ಕನ್ನಡಾನುವಾದವನ್ನು ಮೂಲ ಇಂಗ್ಲಿಷ್‌ನಿಂದ ಮಾಡಲಾಗಿದೆ. *(–ಅನು)*

ತ್ತಿದ್ದರು. ನನ್ನೊಂದಿಗಿದ್ದವರು ಸ್ವಾಮಿ ಪ್ರೇಮಾನಂದರು ಕೊಟ್ಟು ಕಳುಹಿಸಿದ ಪತ್ರದ ಬಗ್ಗೆ ಶ್ರೀಮಾತೆಯವರಿಗೆ ತಿಳಿಸಿದರು. ಶ್ರೀಮಾತೆಯವರು ಆ ಪತ್ರವನ್ನು ಓದಿ ಹೇಳಲು ಒಬ್ಬ ಬ್ರಹ್ಮಚಾರಿಗೆ ತಿಳಿಸಿದರು. ಪತ್ರವನ್ನು ಓದಲಾಯಿತು. ಆಗ ಶ್ರೀಮಾತೆ ಹೇಳಿದರು, ''ಆಗಲಿ. ನಾಳೆ ಇವರಿಗೆ ದೀಕ್ಷೆಯಾಗುವುದು.'' ನಾವು ನಮ್ಮ ಕೋಣೆಗೆ ಮರಳಿದೆವು.

ಮರುದಿನ ನಾವು ಮಂತ್ರದೀಕ್ಷೆಗೆ ಸಿದ್ಧರಾದೆವು. ಶ್ರೀಮಾತೆಯವರು ಶ್ರೀರಾಮಕೃಷ್ಣರ ಬೆಳಗಿನ ಪೂಜೆಯನ್ನು ಮುಗಿಸಿದ ನಂತರ, ನಮಗೋಸ್ಕರ ಒಬ್ಬೊಬ್ಬರಾಗಿ ಬರಲು ಹೇಳಿ ಕಳುಹಿಸಿದರು. ಅಂತೆಯೇ ನಾವು ಮಂತ್ರದೀಕ್ಷೆ ಪಡೆದೆವು. ಸಾಮಾನ್ಯವಾಗಿ ಶ್ರೀಮಾತೆಯವರು ಶ್ರೀರಾಮಕೃಷ್ಣರ ಪೂಜೆಯಾದ ನಂತರವೇ ಮಂತ್ರದೀಕ್ಷೆ ನೀಡುತ್ತಿದ್ದರು. ಆದರೆ ಅವರಿಗೆ ಅಂಥ ಕಠಿಣ ನಿಯಮವೇನೂ ಇರಲಿಲ್ಲ. ಅವರು ಯಾವುದೇ ಪರಿಸ್ಥಿತಿಯಲ್ಲೂ ದೀಕ್ಷೆ ನೀಡುತ್ತಿದ್ದರು. ಅವರು ವಿಷ್ಣುಪುರ ರೈಲ್ವೇ ನಿಲ್ದಾಣದ ಪ್ಲಾಟ್‌ಫಾರಂನಲ್ಲೇ ಒಬ್ಬ ಹಮಾಲಿಗೆ ಮಂತ್ರದೀಕ್ಷೆ ನೀಡಿದ್ದರು ಎಂಬ ವಿಷಯವನ್ನಿಲ್ಲಿ ನೆನೆಯಬಹುದು. ಅವನನ್ನು ಬಳಿಗೆ ಕರೆದ ಅವರು, ಮೂರೆಳೆ ಹುಲ್ಲನ್ನು ನೆಲದಲ್ಲಿಟ್ಟು, ಅದನ್ನೇ ಆಸನವೆಂದು ಪರಿಗಣಿಸಿ, ಅದರ ಮೇಲೆ ಕುಳಿತುಕೊಳ್ಳಲು ಹೇಳಿದ್ದರು. ಅನಂತರ ಅವನಿಗೆ ದೀಕ್ಷೆ ನೀಡಿದ್ದರು. ಇನ್ನೊಬ್ಬಾಕೆ ಮಹಿಳೆ, ಶ್ರೀಮಾತೆಯವರಿಗೆ ಬಾಲ್ಯದಿಂದಲೇ ಪರಿಚಯವಿದ್ದಾಕೆ, ಅವರೊಂದಿಗೆ ಆಟವನ್ನು ಆಡುತ್ತಿದ್ದಾಕೆ, ಒಂದು ದಿನ ಅವರನ್ನು ಭೇಟಿಯಾಗಲು ಬಂದಳು. ಮಧ್ಯಾಹ್ನ ಊಟವಾದ ಮೇಲೆ ಅವರಿಬ್ಬರೂ ಶ್ರೀಮಾತೆಯವರ ಮನೆಯಲ್ಲಿ ಮಲಗಿದ್ದರು. ಆಗಲೇ ಶ್ರೀಮಾತೆ ಅವಳಿಗೆ ದೀಕ್ಷೆ ನೀಡಿದರು. ಅಂಥ ವಿಶೇಷ ನಿಯಮವೇನೂ ಇಲ್ಲವೆಂಬುದನ್ನು ಇದು ತೋರಿಸಿಕೊಡುತ್ತದೆ. ಅವರು ಯಾರಿಗೂ ಇಲ್ಲವೆನ್ನುತ್ತಿರಲಿಲ್ಲ. ಅವರ ಬಳಿಗೆ ಬಂದ ಎಲ್ಲರಿಗೂ ಮಂತ್ರದೀಕ್ಷೆ ದೊರಕಿತ್ತು. ''ಶ್ರೀರಾಮಕೃಷ್ಣರು ಅತ್ಯುತ್ತಮ ವ್ಯಕ್ತಿಗಳನ್ನು ಆರಿಸಿಕೊಂಡರು, ಆದರೆ ಎಲ್ಲ ಸಾಮಾನ್ಯರನ್ನು ನನಗೆ ಬಿಟ್ಟರು. ಇದರಿಂದಾಗಿ ನಾನು ಇಷ್ಟೊಂದು ನರಳಬೇಕಾಗಿದೆ'' ಎಂದು ಅವರು ಹೇಳುತ್ತಿದ್ದರು. ಆದರೂ ಅವರು ಯಾರಿಗೂ ಮಂತ್ರದೀಕ್ಷೆ ನೀಡಲು ನಿರಾಕರಿಸುತ್ತಿರಲಿಲ್ಲ. ಆಗ ದೇಶದ ಎಲ್ಲೆಡೆ ರಾಜಕೀಯವಾಗಿ ಕ್ರಾಂತಿಕಾರಿ ಚಳವಳಿ ಜೋರಾಗಿ ನಡೆಯುತ್ತಿತ್ತು. ಅಂಥ ಚಳವಳಿಯಲ್ಲಿ ಭಾಗವಹಿಸುತ್ತಿದ್ದ ಯುವಕರು ಶ್ರೀಮಾತೆಯವರ ಬಳಿಗೆ ಬಂದು, ಅವರಿಗೆ ಗೌರವ ಸಲ್ಲಿಸಿ ಅವರಿಂದ ದೀಕ್ಷೆ ಪಡೆಯುತ್ತಿದ್ದರು. ಪೋಲೀಸರು ಇದನ್ನೆಲ್ಲ ಗಮನಿಸುತ್ತಿದ್ದರು. ಸಿ.ಐ.ಡಿ ಪೋಲೀಸರ ಕಣ್ಗಾವಲಿನಲ್ಲಿ ಶ್ರೀಮಾತೆಯವರ ಮನೆ ಇರುತ್ತಿತ್ತು; ಆದರೂ ಶ್ರೀಮಾತೆ ಅದಕ್ಕೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಒಂದು ಸಲ ಇಬ್ಬರು ಯುವಕರು ಬಂದರು. ಅವರು ಕ್ರಾಂತಿಕಾರಿಗಳಾಗಿದ್ದರು. ಅವರಿಬ್ಬರಿಗೂ ಸ್ನಾನ ಮಾಡಲು ಹೇಳಿ, ಬಳಿಕ ಅವರಿಗೆ ಶ್ರೀಮಾತೆ ಮಂತ್ರದೀಕ್ಷೆ ನೀಡಿದರು. ಅನಂತರ ಅವರಿಗೆ ಊಟ ಬಡಿಸಿ, ಊಟವಾದ ಮೇಲೆ ಅವರು ಅಲ್ಲಿಂದ ಹೊರಟುಹೋಗಬೇಕೆಂದೂ, ಅಲ್ಲಿ ತಂಗಬಾರದೆಂದೂ ತಿಳಿಸಿದರು. ಅವರು ಈ ರೀತಿಯಲ್ಲಿ ದೀಕ್ಷೆ ನೀಡಿದ್ದರು. ಅವರು ತಮ್ಮ ಜೀವಿತದ ಕೊನೆಯ ಗಳಿಗೆಯವರೆಗೂ ದೀಕ್ಷೆ ಕೊಡುವುದನ್ನು ನಿಲ್ಲಿಸಲಿಲ್ಲ. 'ಉದ್ಬೋಧನ'ದಲ್ಲಿ ಶ್ರೀಮಾತೆ ಗಂಭೀರವಾಗಿ ಕಾಯಿಲೆಗೆ ಒಳಗಾಗಿದ್ದಾಗ, ಬೇಲೂರು ಮಠದ ಅತಿಥಿಯಾಗಿದ್ದ ಒಬ್ಬ ಪಾರ್ಸಿ ಯುವಕ ಅವರ ಬಳಿಗೆ ಬಂದ. ಅವರ ದರ್ಶನ ಹಾಗೂ ದೀಕ್ಷೆಗಾಗಿ ಅವನು ಬಂದಿದ್ದ. ಶ್ರೀಮಾತೆಗೆ ಅಷ್ಟೊಂದು ಕಾಯಿಲೆ ಇದ್ದುದರಿಂದ ಆಗ ಯಾರನ್ನೂ ಅವರ ದರ್ಶನಕ್ಕಾಗಿ ಬಿಡುತ್ತಿರಲಿಲ್ಲ. ಈ ಯುವಕ ಕೆಳ ಅಂತಸ್ತಿನಲ್ಲಿ ಕುಳಿತಿದ್ದ, ಅವನನ್ನು ಶ್ರೀಮಾತೆಯವರ ದರ್ಶನಕ್ಕೆ ಬಿಟ್ಟಿರಲಿಲ್ಲ. ಆದರೆ ಅವನು ಬಂದ ವಿಷಯ ಹೇಗೋ ಶ್ರೀಮಾತೆಯವರ ಗಮನಕ್ಕೆ ಬಂದಿತ್ತು. ಅವನನ್ನು ತಮ್ಮ ಬಳಿಗೆ ಕಳುಹಿಸಲು ಅವರು ಯಾರಿಗೋ ಹೇಳಿ ಕೆಳ ಅಂತಸ್ತಿಗೆ ಕಳುಹಿಸಿದರು. ಸ್ವಾಮಿ ಶಾರದಾನಂದರಿಗೆ ಈ ವಿಷಯ ತಿಳಿದಾಗ ಅವರು, ''ಶ್ರೀಮಾತೆಯವರಿಗೆ ಪಾರ್ಸಿ ಶಿಷ್ಯನೊಬ್ಬ ಇರಲೆಂಬ ಆಸೆಯಿದ್ದರೆ, ನಾನೇನು ಹೇಳಲಿ?'' ಎಂದರು. ಆ ಯುವಕ ಬೇರಾರೂ ಅಲ್ಲ, ಮುಂಬಯಿಯ ಪ್ರಸಿದ್ಧ ಸಿನಿಮಾ ನಟ ಹಾಗೂ ನಿರ್ಮಾಪಕನಾದ ಶ್ರೀ ಸೊಹ್ರಾಬ್ ಮೋದಿ. ಈ ರೀತಿ ಶ್ರೀಮಾತೆ ತಮ್ಮ ಕೊನೆಯ ಕ್ಷಣದವರೆಗೂ ಯಾರಿಗಾದರೂ, ಯಾವ ಸಮಯದಲ್ಲಾದರೂ ದೀಕ್ಷೆ ನೀಡಲು ಹಿಂಜರಿಯುತ್ತಿರಲಿಲ್ಲ.

ಶ್ರೀಮಾತೆಯವರಲ್ಲಿ ಇನ್ನೊಂದು ಸಂಗತಿಯನ್ನು ನಾವು ಗಮನಿಸಿದ್ದೇವೆ. ಅವರೇ ಶ್ರೀಮಾತೆ ಎಂದು ಕಂಡುಹಿಡಿಯಬಹುದಾದ ಯಾವುದೇ ವಿಶೇಷತೆ ಹೊರನೋಟಕ್ಕೆ ಅವರಲ್ಲಿ ಇರುತ್ತಿರಲಿಲ್ಲ. ಸಾಮಾನ್ಯ ಹಳ್ಳಿಯ ಹೆಂಗಸಿನಂತೆ ಅವರಿದ್ದರು. ಅವರು ಹಲವು ಮಂದಿ ಹೆಂಗಸರ ನಡುವೆ ಇದ್ದಾಗ, ಇವರೇ ಶ್ರೀಮಾತೆ ಎಂದು ಗುರುತಿಸುವುದು ತುಂಬಾ ಕಷ್ಟವಾಗಿತ್ತು. ಗಿರೀಶ ಬಾಬು ಹೇಳಿದ್ದರು: ''ನಮ್ಮ ಮುಂದೆ ನಿಂತಿರುವ ಈ ಹೆಂಗಸು, ಇತರ ಯಾವುದೇ ಹಳ್ಳಿಯ ಗೃಹಿಣಿಯಂತಿರುವವರು ಸಮಸ್ತ ವಿಶ್ವದ ರಾಜರಾಜೇಶ್ವರಿಯಾಗಿದ್ದಾಳೆ ಎಂದು ಯಾರು ಹೇಳಬಹುದಾಗಿತ್ತು?'' ಒಂದು ಸಲ ಸ್ವಾಮಿ ಶಾರದಾನಂದರು ಹೇಳಿದ್ದರು, ''ಶ್ರೀರಾಮಕೃಷ್ಣರಲ್ಲಿ ತಮ್ಮ ಆಂತರಿಕ ಭಾವದ ಕೆಲವೊಂದು ಅಭಿವ್ಯಕ್ತಿಯಾದರೂ ಇರುತ್ತಿದ್ದವು. ಆದರೆ ಶ್ರೀಮಾತೆಯವರಲ್ಲಿ ಅದು ಯಾವುದೂ ಇರುತ್ತಿರಲಿಲ್ಲ. ಅವರಲ್ಲಿ ಅಸಾಧಾರಣ ನಿಗ್ರಹವಿರುತ್ತಿತ್ತು. ಯಾವುದೇ ಬಾಹ್ಯ ಚಿಹ್ನೆ ಅವರಲ್ಲಿ ಇರುತ್ತಿರಲಿಲ್ಲ. ಅವರು ದಪ್ಪವಾದ ಅವಗುಂಠನವನ್ನು ಹಾಕಿಕೊಂಡಂತೆ ಇರುತ್ತಿದ್ದರು. ಈ ಕಾರಣದಿಂದ ಅವರನ್ನು ಯಾರಿಗೂ ಗುರುತಿಸುವುದು ಸಾಧ್ಯವಾಗುತ್ತಿರಲಿಲ್ಲ.'' ಅವರು ದೈವೀ ವ್ಯಕ್ತಿಯಾಗಿದ್ದರೂ, ಅವರನ್ನು ಯಾರೂ ಅರಿತುಕೊಂಡಿರಲಿಲ್ಲ. ಮದ್ರಾಸಿನ ಜನರು ಶ್ರೀಮಾತೆಯವರು ಅಲ್ಲಿಗೆ ಬರಲಿದ್ದಾರೆ ಎಂಬುದನ್ನು ಅರಿತಾಗ, ಸ್ವಾಮಿ ರಾಮಕೃಷ್ಣಾನಂದರ ಬಳಿಗೆ

ಹೋಗಿ, ಶ್ರೀಮಾತೆ ಭಾಷಣ ಕೊಡುತ್ತಾರೆಯೇ ಎಂದು ಕೇಳಿದರು. ರಾಮಕೃಷ್ಣಾನಂದರು ಇಲ್ಲವೆಂದು ಉತ್ತರಿಸಿದರು.

ಗ್ರಾಮದಲ್ಲಿ ಇನ್ನೊಬ್ಬ ಒಳ್ಳೆಯ ಯುವಕನಿದ್ದ. ಚೆನ್ನಾಗಿ ಹಾಡುತ್ತಿದ್ದ; ಎಲ್ಲರಿಗೂ ಅವನು ಅಚ್ಚುಮೆಚ್ಚು. ಇದ್ದಕ್ಕಿದ್ದಂತೆ ಒಂದು ದಿನ ಅವನು ಮಾಯವಾದ. ಯಾರಿಗೂ ಅವನ ವಿಷಯ ತಿಳಿಯಲಿಲ್ಲ. ಕೆಲವು ವರ್ಷಗಳ ನಂತರ ಅವನು ಊರಿಗೆ ಮರಳಿದ. ಅವನು ಮರಳಿ ಬಂದಾಗ ಊರಲ್ಲೆಲ್ಲ ಭಾರೀ ಗದ್ದಲವಾಯಿತು. ತುಂಬ ಮಂದಿ ಅವನನ್ನು ಸುತ್ತುವರಿದರು; ಘೇರಾವೋ ಮಾಡಿದಂತೆ. ಅವನ ಬಳಿ ನಾನಾ ಪ್ರಶ್ನೆಗಳನ್ನು ಕೇಳಿದರು. ಅಲ್ಲಿ ಉಂಟಾದ ಗದ್ದಲ ಎಷ್ಟು ಜೋರಾಗಿತ್ತೆಂದರೆ, ಶ್ರೀಮಾತೆಯವರಿಗೂ ಅದೇನೆಂದು ತಿಳಿಯುವ ಕುತೂಹಲ ವುಂಟಾಯಿತು. ಸಾಮಾನ್ಯವಾಗಿ ಶ್ರೀಮಾತೆಯವರು ಎಂದೂ ತಮ್ಮ ಮನೆಯಿಂದ ಹೊರಬಿದ್ದು, ಬೇರೆಯವರ ಮನೆಗೆ ಹೋಗುತ್ತಿರಲಿಲ್ಲ. ಆದರೆ ಅಂದು ಏನಾಗುತ್ತಿದೆ ಎಂದು ಅವರಿಗೆ ತಿಳಿಯಬೇಕೆನಿಸಿತು. ಅವರು ಪಕ್ಕದ ಮನೆಯ ಅಂಗಳದ ತನಕ ಬಂದರು. ಅವರಿಗೆ ಕಾಣೆಯಾದ ಆ ಹುಡುಗ ಕಾಣಿಸಿಕೊಂಡ; ಜನರೆಲ್ಲ ಅವನನ್ನು ನಾನಾ ಬಗೆಯಲ್ಲಿ ಇಷ್ಟು ದಿನ ಎಲ್ಲಿಗೆ ಹೋಗಿದ್ದೆ ಎಂದೆಲ್ಲ ಕೇಳತೊಡಗಿದರು. ಶ್ರೀಮಾತೆ ಏನನ್ನೂ ಹೇಳದೆ ಸುಮ್ಮನಿದ್ದರು. ಸ್ವಲ್ಪ ಹೊತ್ತಾದ ನಂತರ, ''ಮಗೂ, ನೀನು ಸಾಧುವಾಗಿ ಒಳ್ಳೆಯ ಕೆಲಸ ಮಾಡಿದೆ'' ಎಂದರು. ಈ ಮಾತನ್ನು ಅವರು ಮೂರು ಬಾರಿ ಹೇಳಿದರು. ಅಂದು ಮಧ್ಯಾಹ್ನ ತಮ್ಮ ಮನೆಗೆ ಪ್ರಸಾದ (ಭೋಜನ) ಸ್ವೀಕರಿಸಲು ಅವನನ್ನು ಆಹ್ವಾನಿಸಿದರು.

ಭಕ್ತರು ಶ್ರೀಮಾತೆಯವರ ಬಳಿಗೆ ಬಂದು, ತಮ್ಮ ಹೆಣ್ಣು ಮಕ್ಕಳಿಗೆ ಮದುವೆ ಮಾಡಲು ಸರಿಯಾದ ಹುಡುಗ ಸಿಗುತ್ತಿಲ್ಲವೆಂದು ಹೇಳುತ್ತಿದ್ದರು. ಆಗ ಶ್ರೀಮಾತೆ, ''ಇದೇಕೆ ಜನರು ನನ್ನ ಬಳಿಗೆ ಬಂದು ಹೀಗೆಲ್ಲ ಹೇಳುತ್ತಾರೆ? ಅವರು ತಮ್ಮ ಹೆಣ್ಣು ಮಕ್ಕಳನ್ನು ನಿವೇದಿತಾ ಬಾಲಕಿಯರ ಶಾಲೆಗೆ ಏಕೆ ಕಳುಹಿಸಬಾರದು?'' ಎನ್ನುತ್ತಿದ್ದರು. ಇದು ಶ್ರೀಮಾತೆಯವರ ವಿಧಾನ.

ಅವರು ಎಲ್ಲ ಜನರ ಮೇಲೆ ಹರಿಸುತ್ತಿದ್ದ ಪ್ರೀತಿಯ ಬಗ್ಗೆ ಆಲೋಚಿಸಿ. ಅದನ್ನು ಯಾರಿಂದಲೂ ಮರೆಯಲಾಗದು. ಶ್ರೀಮಾತೆಯವರ ಮನೆಗೆ ಒಬ್ಬಳು ಹೆಂಗಸು ಬಂದು ತರಕಾರಿ ಹೆಚ್ಚಿಕೊಡುತ್ತಿದ್ದಳು. ಶ್ರೀಮಾತೆಯವರು ತೀರಿಕೊಂಡ ನಂತರವೂ ಅವಳು ಆಗಾಗ ಅಲ್ಲಿಗೆ ಹೋಗಿ ಸ್ವಲ್ಪ ಹೊತ್ತು ಅಲ್ಲಿ ಇದ್ದು ಹೊರಟುಹೋಗುತ್ತಿದ್ದಳು. ಅವಳನ್ನು ಯಾರಾದರೂ, ''ನೀನೇಕೆ ಇನ್ನೂ ಇಲ್ಲಿಗೆ ಬರುತ್ತಿದ್ದೀಯಾ?'' ಎಂದು ಕೇಳಿದರೆ ಅವಳು, ''ಶ್ರೀಮಾತೆಯವರು ಎಷ್ಟೊಂದು ಅನುಕಂಪವುಳ್ಳವರೆಂದರೆ, ನನಗೆ ಅವರನ್ನು ಮರೆಯಲಾಗುತ್ತಿಲ್ಲ. ಅದಕ್ಕಾಗಿ ನಾನು ಇಲ್ಲಿಗೆ ಬಂದು ಸ್ವಲ್ಪ ಹೊತ್ತು ಇದ್ದು ಹೋಗುತ್ತೇನೆ. ನನಗೆ ಆಗ ತುಂಬಾ ಆನಂದವಾಗುತ್ತದೆ'' ಎನ್ನುತ್ತಿದ್ದಳು.

ಮೊದಲನೇ ಮಹಾಯುದ್ಧದ ಸಂದರ್ಭದಲ್ಲಿ ಸಾಧಾರಣ ಸ್ಪಿರಿಟ್ ಸಿಗುತ್ತಿರಲಿಲ್ಲ ; ಅದಕ್ಕೆ ಬಹಳ ಅಭಾವವಿತ್ತು — ಯುದ್ಧಕ್ಕಾಗಿ ಅದರ ಬಳಕೆಯಾಗುತ್ತಿತ್ತು. ಬರೀ ಆರು ಆಣೆಗೆ ಸಿಗುತ್ತಿದ್ದ ಒಂದು ಬಾಟಲಿ ಸ್ಪಿರಿಟ್ ಕೂಡ ಅಂಗಡಿಯಲ್ಲೆಲ್ಲೂ ಲಭ್ಯವಿರಲಿಲ್ಲ. ಒಬ್ಬ ಭಕ್ತ ಹೇಗೋ ಕೆಲವು ಬಾಟಲಿಗಳನ್ನು ಸಂಪಾದಿಸಿ, ಜಯರಾಮಬಾಟಿಯ ಆಸ್ಪತ್ರೆಯ ಉಪಯೋಗಕ್ಕಾಗಿ ತಂದುಕೊಡುತ್ತಿದ್ದ. ಶ್ರೀಮಾತೆಯವರು ಸಂಧಿವಾತದಿಂದಾಗಿ ತುಂಬಾ ನೋವು ಅನುಭವಿಸುತ್ತಿದ್ದರು; ಅದಕ್ಕೆ ಸ್ಪಿರಿಟ್ ಹಚ್ಚಿದಾಗ ನೋವು ತುಸು ಕಡಿಮೆಯಾಗುತ್ತಿತ್ತು. ಅದನ್ನು ಬಳಸಲು ಅವರನ್ನು ಕೇಳಿಕೊಂಡಾಗ ಅವರು ಹೇಳಿದರು: ''ಸ್ಪಿರಿಟನ್ನು ತಂದಿರುವುದು ಬಡ ಜನರಿಗೋಸ್ಕರ. ಅದನ್ನು ನನಗೆ ನೋವು ಕಡಿಮೆಯಾಗಲು ಬಳಸಿದರೆ, ಅದನ್ನು ಅವರಿಂದ ಕಿತ್ತುಕೊಂಡಂತಾಗುವುದು.'' ಅವರು ಹಾಗೆ ಭಾವಿಸಿದ್ದರು. ಇನ್ನೊಂದು ಸಲ ಒಬ್ಬ ಭಕ್ತ ಬಂದು ಅವರಿಗೆ ಹೇಳಿದ, ''ಅಮ್ಮಾ ಇಂತಿಂಥ ವ್ಯಕ್ತಿ ಒಂದು ಉಯಿಲನ್ನು ಬರೆದು, ಇಂತಿಂಥ ವಸ್ತುಗಳನ್ನು ಬೇಲೂರು ಮಠಕ್ಕೆ ಕೊಟ್ಟಿದ್ದಾನೆ.'' ಅವನು ಮಾತು ಮುಗಿಸುವ ತನಕ ಶ್ರೀಮಾತೆ ಎಲ್ಲವನ್ನೂ ಕೇಳಿಸಿಕೊಂಡರು. ಅನಂತರ ಅವರೆಂದರು, ''ನಿಜ, ಅವನು ಇದನ್ನೆಲ್ಲಾ ಮಾಡಿದ. ಆದರೆ ಅವನು ಬಡ ಜನರಿಗೆ ಹಾಗೂ ಕಷ್ಟದಲ್ಲಿ ಇರುವವರಿಗಾಗಿ ಏನಾದರೂ ಕೊಟ್ಟಿರುವನೆ?'' ಅದಕ್ಕೆ ಆ ವ್ಯಕ್ತಿಯ ಬಳಿ ಏನೂ ಉತ್ತರವಿರಲಿಲ್ಲ. ಏಕೆಂದರೆ ಉಯಿಲು ಬರೆದವನು ಬಡವರಿಗಾಗಿ ಏನೂ ಕೊಟ್ಟಿರಲಿಲ್ಲ. ಶ್ರೀಮಾತೆಯವರು ದೀನ–ದಲಿತರ, ಕಷ್ಟದಲ್ಲಿರುವವರ ಬಗ್ಗೆ ಯಾವಾಗಲೂ ಹೀಗೆ ಮಿಡಿಯುತ್ತಿದ್ದರು. ಬಡವರ, ದುಃಖಿತರ ಹಾಗೂ ಹಿಂದುಳಿದವರ ನಿರ್ಲಕ್ಷ್ಯ ಮಾಡಿದ್ದರಿಂದಲೇ ನಮ್ಮ ದೇಶ ಪಾಶ್ಚಾತ್ಯರ ಆಧಿಪತ್ಯಕ್ಕೆ ಒಳಗಾಯಿತು ಎಂದು ಸ್ವಾಮೀಜಿ ಕೂಡ ಸಾರಿದ್ದಾರೆ. ಜನಸಾಮಾನ್ಯರನ್ನು ಕಡೆಗಣಿಸಿದ್ದರಿಂದಲೇ ನಾವು ಸಾವಿರ ವರ್ಷಗಳ ಕಾಲ ಪಾಶ್ಚಾತ್ಯರ ಒಡೆತನಕ್ಕೆ ಒಳಗಾಗಬೇಕಾಯಿತು. ಆದ್ದರಿಂದ ಬಡವರ ಹಾಗೂ ದುಃಖಿತರ ಉದ್ಧಾರವೇ ನಮ್ಮ ಆದ್ಯ ಕರ್ತವ್ಯವಾಗಬೇಕೆಂದು ಶ್ರೀಮಾತೆಯವರೂ ನಮಗೆ ಬೋಧಿಸುತ್ತಾರೆ. ನಮ್ಮ ಈ ಧ್ಯೇಯವನ್ನು ಎಂದಿಗೂ ಮರೆಯತಕ್ಕದ್ದಲ್ಲ ಎಂದು ಸ್ವಾಮೀಜಿ ಎಚ್ಚರಿಕೆ ನೀಡಿದ್ದಾರೆ.

ಶ್ರೀಮಾತೆಯವರನ್ನು ಒಮ್ಮೆ ಅವರ ತಾಯಿ ಶ್ಯಾಮಾಸುಂದರಿ ಕೇಳಿದರು, ''ಒಂದು ಕಾಲ ಮೇಲೆ ಇನ್ನೊಂದನ್ನಿಟ್ಟು ಕುಳಿತ ದೇವತೆ ಯಾರು?'' ಎಂದು. ಅದಕ್ಕೆ ಶ್ರೀಮಾತೆ, ''ಜಗದ್ಧಾತ್ರಿ'' ಎಂದು ಉತ್ತರಿಸಿದ್ದರು. ''ಹಾಗಿದ್ದರೆ ಅವಳನ್ನು ನಾನು ಪೂಜಿಸುತ್ತೇನೆ'' ಎಂದಿದ್ದರು ಶ್ಯಾಮಾಸುಂದರಿ. ಅವರು ಎರಡು ವರ್ಷ ಜಗದ್ಧಾತ್ರಿಯ ಪೂಜೆ ಮಾಡಿದರು. ಮೂರನೇ ಬಾರಿ ಪೂಜೆ ಮಾಡಹೊರಟಾಗ ಶ್ರೀಮಾತೆ ಅವರನ್ನು ತಡೆದು, ''ಇದೆಲ್ಲ ಜವಾಬ್ದಾರಿ ವಹಿಸಿಕೊಳ್ಳಲು ನಾನಿನ್ನೂ ಸಿದ್ಧಳಾಗಿಲ್ಲ'' ಎಂದರು. ಆದರೆ ಕೊನೆಗೂ ಅವರು ಒಪ್ಪಿದರು; ಪೂಜೆ ನಡೆಯಿತು. ಆದರೆ

ಪೂಜೆಗೆ ನಿರ್ಧಾರ ತೆಗೆದುಕೊಂಡಾಗ ತಡವಾಗಿತ್ತು. ಆಗ ಜೋರಾಗಿ ಮಳೆ ಆರಂಭವಾಯಿತು. ಶ್ರೀಮಾತೆ ಸ್ವಾಮಿ ಶಾಂತಾನಂದರಿಗೆ ಹೇಳಿದ್ದರು, ''ಜೋರಾಗಿ ಮಳೆ ಬರುತ್ತಿತ್ತು. ಪೂಜೆಗೆ ಬೇಕಾದ ವಸ್ತುಗಳನ್ನೆಲ್ಲ ಒಣಗಿಸಲು ಸಾಧ್ಯವಿರಲಿಲ್ಲ. ಆದರೆ ಅದೃಷ್ಟವಶಾತ್ ಎಲ್ಲೆಡೆ ಮಳೆ ಸುರಿಯುತ್ತಿದ್ದರೂ, ನಮ್ಮ ಮನೆ ಅಂಗಳದಲ್ಲಿ ಮಾತ್ರ ಮಳೆಯಿರಲಿಲ್ಲ. ಒಂದು ಪವಾಡದಂತೆ ನಡೆಯಿತು; ಆದರೆ ಹೀಗಾದುದು ಮಾತ್ರ ನಿಜ.''

ಇನ್ನೊಂದು ಸಂದರ್ಭದಲ್ಲಿ ಏನು ನಡೆಯಿತು ಎಂಬುದನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಶ್ರೀಮಾತೆಯವರ ಮಹಾಸಮಾಧಿಯಾದ ನಂತರ, ಅವರ ದೇಹವನ್ನು ಬೇಲೂರು ಮಠಕ್ಕೆ ಕರೆತಂದು, ಈಗ ಅವರ ದೇವಾಲಯವಿರುವಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು. ಆಗ ಅಲ್ಲಿ ಸ್ನಾನಘಟ್ಟವಿರಲಿಲ್ಲ. ನೆಲದಿಂದ ನದಿಯ ಕಡೆಗೆ ಇಳಿಜಾರಾಗಿತ್ತು. ಅಲ್ಲಿ ಶ್ರೀಮಾತೆಯವರ ಅಂತ್ಯಸಂಸ್ಕಾರ ನಡೆಯಿತು. ಚಿತೆಗೆ ಅಗ್ನಿಸ್ಪರ್ಶವಾಗಿ, ಜ್ವಾಲೆ ಮೇಲಕ್ಕೆದ್ದಿತ್ತು. ನದಿಯ ಇನ್ನೊಂದು ದಂಡೆಯಲ್ಲಿ ಧಾರಾಕಾರ ಮಳೆ ಸುರಿಯುತ್ತಿತ್ತು. ಎಂಥ ಭಯಂಕರ ಮಳೆಯೆಂದರೆ, ನಮಗೆ ಇನ್ನೊಂದು ದಡವಾಗಲಿ, ಅಲ್ಲಿನ ಕಟ್ಟಡಗಳಾಗಲಿ ಕಾಣಿಸುತ್ತಿರಲಿಲ್ಲ. ನದಿಯ ಮಧ್ಯಭಾಗದವರೆಗೂ ಮಳೆ ಬಂದುಬಿಟ್ಟಿತ್ತು. ಆದರೆ ಬೇಲೂರು ಮಠವಿದ್ದ ಈ ದಡದಲ್ಲಿ ಮಳೆ ಸ್ವಲ್ಪವೂ ಇರಲಿಲ್ಲ. ಇತ್ತ ಬಿಸಿಲಲ್ಲಿ ಎಲ್ಲವೂ ಕಾಣಿಸುತ್ತಿತ್ತು; ಚಿತೆ ಕೂಡ ಚೆನ್ನಾಗಿ ಉರಿಯುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ದೇಹವೆಲ್ಲ ಸಂಪೂರ್ಣ ಉರಿದುಹೋಯಿತು. ಬಳಿಕ ಬೆಂಕಿ ಆರಿಸಬೇಕಿತ್ತು. ಅಲ್ಲೊಬ್ಬ ವ್ಯಕ್ತಿಯಿದ್ದ; ಅವನು ತಾಂತ್ರಿಕ ಸಾಧಕ. ತಾಂತ್ರಿಕ ಪದ್ಧತಿಯ ಪ್ರಕಾರ ಬೆಂಕಿ ಆರಿಸಬೇಕೆಂದು ಅವನು ಹೇಳಿದ. ಆದರೆ ಅದಕ್ಕೆ ಬೇಕಾದ ಸಲಕರಣೆಗಳು ಅವನ ಬಳಿ ಇರಲಿಲ್ಲ. ಅವನ್ನು ತರಲು ಅವನು ಅಂಗಡಿಗೆ ಹೋಗಿದ್ದ. ಆದರೆ ಎಷ್ಟು ಹೊತ್ತಾದರೂ ಬರಲಿಲ್ಲ. ಹೊತ್ತು ಮೀರುತ್ತಿದೆ. ಸ್ವಾಮಿ ನಿರ್ಮಲಾನಂದರು ತಾಳ್ಮೆಗೆಟ್ಟು, ದೊಡ್ಡ ಒಂದು ಕೊಡದೊಂದಿಗೆ ನದಿಯತ್ತ ಹೋದರು. ಕೊಡದಲ್ಲಿ ನೀರು ತುಂಬಿ, ಶರತ್ ಮಹಾರಾಜರಿಗೆ ಅದನ್ನು ಕೊಟ್ಟು, ''ನೀವು ನೀರನ್ನು ಅದರ ಮೇಲೆ ಹಾಕಿ ಬೆಂಕಿ ಆರಿಸಿದರೆ ಒಳ್ಳೆಯದು'' ಎಂದರು. ಶರತ್ ಮಹಾರಾಜರು ನೀರು ಚೆಲ್ಲಿದರು. ನದಿಯಿಂದ ತುಂಬಾ ಜನರು ನೀರು ತಂದಿದ್ದರು; ಆದರೆ ಅವರಾರಿಗೂ ನೀರು ಹಾಕಲಾಗಲಿಲ್ಲ. ಶರತ್ ಮಹಾರಾಜರು ನೀರು ಹಾಕಿದ ಕೂಡಲೇ ನದಿಯ ಇನ್ನೊಂದು ದಡದಿಂದ ಮಳೆ ಅಬ್ಬರಿಸಿ, ಈ ದಡಕ್ಕೂ ಬಂದೇಬಿಟ್ಟಿತು. ಅದು ಎಂಥ ಅಬ್ಬರದ ಮಳೆಯೆಂದರೆ, ಒಂದು ಕ್ಷಣದಲ್ಲೇ ಚಿತೆಯ ಬೆಂಕಿ ಆರಿಬಿಟ್ಟಿತು. ಶರತ್ ಮಹಾರಾಜರ ನಂತರ ಯಾರಿಗೂ ನೀರು ಸುರಿಯಲಾಗಲಿಲ್ಲ. ನಾವೆಲ್ಲರೂ ಚೆನ್ನಾಗಿ ನೆನೆದು ಬಿಟ್ಟಿದ್ದೆವು. ಇಂಥ ಘಟನೆಗಳು ನಡೆದಿವೆ. ಅವು ಬಹಳ ವಿಚಿತ್ರವಾಗಿ, ಪವಾಡಸದೃಶವೆಂಬಂತೆ ಕಂಡುಬರುತ್ತವೆ.

ಇಬ್ಬರು ಕ್ರಾಂತಿಕಾರಿ ತರುಣರು ಶ್ರೀಮಾತೆಯವರ ಬಳಿಗೆ ಬಂದು, ದೀಕ್ಷೆ ಪಡೆದು ಹೋದ ವಿಚಾರವನ್ನು ಹಿಂದೆ ಹೇಳಿದೆ. ಅವರಲ್ಲೊಬ್ಬ ಶ್ರೀಮಾತೆಯವರನ್ನು ಕೇಳಿದ್ದ, ''ಅಮ್ಮಾ, ನಮಗೆ ಯಾವಾಗ ಸ್ವಾತಂತ್ರ್ಯ ಸಿಗುವುದು?'' ಶ್ರೀಮಾತೆ ಶಾಂತವಾಗಿ ಉತ್ತರಿಸಿದ್ದರು: ''ಅವರನ್ನು ನೀನು ಓಡಿಸಬಲ್ಲೆಯಾ? ಇಲ್ಲ, ನಿನ್ನಿಂದಾಗದು. ಆದರೆ ಅವರು ತಮ್ಮತಮ್ಮಲ್ಲೇ ಕಾದಾಡುವಾಗ ನಿನಗೆ ಸ್ವಾತಂತ್ರ್ಯ ಸಿಗುವುದು.'' ಶ್ರೀಮಾತೆ ಹೇಗೆ ಹೇಳಿದ್ದರೋ ಹಾಗೇ ಎಲ್ಲವೂ ನಡೆದಿರುವುದನ್ನು ಮುಂದೆ ಇತಿಹಾಸ ತೋರಿಸಿಕೊಟ್ಟಿತು.

ಕೊನೆಯದಾಗಿ ಇನ್ನೂ ಕೆಲವು ಸಂಗತಿಗಳಿವೆ: ಶ್ರೀಮಾತೆಯವರ ಬಳಿ ಭಕ್ತರು ನಮಗೆ ಏನೂ ಸಿಗುತ್ತಿಲ್ಲ , ಅಂದರೆ ನಮ್ಮ ಆಧ್ಯಾತ್ಮಿಕ ಸಾಧನೆ ನಿಸ್ಸಾರ ಎಂದು ಹೇಳಿದಾಗ ಅವರು ಹೀಗೆ ಉತ್ತರಿಸುತ್ತಿದ್ದರು: ''ನೀನು ಕಡೇ ಪಕ್ಷ ಒಂದು ದಿನದಲ್ಲಿ ೧೦,೦೦೦ದಿಂದ ೧೫,೦೦೦ದಷ್ಟಾದರೂ ಮಂತ್ರ ಜಪ ಮಾಡಿ ನೋಡು. ನಂತರ ನಿನಗೇನಾದರೂ ಸಿಗುತ್ತದೋ ಇಲ್ಲವೋ ನೋಡುತ್ತೇನೆ. ಋಷಿ-ಮುನಿಗಳೆಲ್ಲ ಹಲವು ಜನ್ಮಗಳಲ್ಲಿ ಸಾಧನೆ, ತಪಸ್ಸುಗಳನ್ನು ಮಾಡಿ ಸತ್ಯದ ಸಾಕ್ಷಾತ್ಕಾರಕ್ಕೆ ಯತ್ನಿಸುತ್ತಿದ್ದರು. ನಿನಗೆ ಅದು ಏನೂ ಮಾಡದೆ, ಅಷ್ಟೊಂದು ಸುಲಭವಾಗಿ ಸಿಗ ಬೇಕೆಂದು ಬಯಸುತ್ತೀಯಾ? ಪ್ರಯತ್ನದ ಮೂಲಕವೇ ನೀನು ಬಯಸಿದ್ದು ಸಿಗುವುದು. ಎಲ್ಲರೂ ಬಂದು 'ಕೃಪೆ, ಕೃಪೆ' ಎಂದು ಕೇಳುತ್ತಾರೆ. ಕೃಪೆಯಿಂದ ಏನಾದೀತು? ಕೃಪೆ ಬರುತ್ತದೆ, ಹೋಗುತ್ತದೆ. ಯಾರಿಗೆ ಕೃಪೆ ಬಂದು ಹೊರಟು ಹೋಗಿದೆಯೋ, ಅವನು ಅದನ್ನು ಪಡೆಯಲು ಸಿದ್ಧನಾಗಿಲ್ಲವೆನ್ನಬೇಕು.'' ಆದರೆ ಅವರು ಈ ಮಾತನ್ನು ಹೇಳಿ ಪ್ರೇರಣೆ ನೀಡುತ್ತಿದ್ದರು: ''ಶ್ರೀರಾಮಕೃಷ್ಣರು ಬಂದು ಎಲ್ಲವನ್ನೂ ಸುಲಭ ಮಾಡಿಕೊಟ್ಟಿದ್ದಾರೆ — ಆದ್ದರಿಂದ ಈ ಯುಗದಲ್ಲಿ ಯಾರು ಒಂದು ಸ್ವಲ್ಪವಾದರೂ ಸಾಧನೆ ಮಾಡುವರೋ ಅವರು ಭಗವಂತನನ್ನು ಹೊಂದುವರು.''

ಕೊನೆಯದಾಗಿ, ಅವರ ಅಂತಿಮ ಸಂದೇಶ : ಅವರೆಂದರು, ''ಕಾರೋ ದೋಷ್ ದೇಖೋ ನಾ'' ಅಂದರೆ, 'ಬೇರೆಯವರ ದೋಷವನ್ನೆಂದಿಗೂ ನೋಡಬೇಡ.' ಅವರು ಇನ್ನೊಂದು ಮಾತನ್ನೂ ಹೇಳಿದ್ದಾರೆ: ''ಯಾವಾಗ ನಿನಗೆ ಕಷ್ಟ, ಚಿಂತೆ ಬಂದೊದಗುವುದೋ, ಆಗ ನೆನೆದುಕೊ — ನಿನಗೊಬ್ಬಳು ತಾಯಿ ಇದ್ದಾಳೆ ಎಂದು.''

ಕಷ್ಟ ಬಂದಾಗಲೆಲ್ಲ ನಾವು ಶ್ರೀಮಾತೆಯವರನ್ನು ಪ್ರಾರ್ಥಿಸೋಣ. ಅವರು ನಮ್ಮ ಚಿಂತೆಯನ್ನು ಹೋಗಲಾಡಿಸುವರು.

ಶ್ರೀಮಾತೆಯವರು ಎಲ್ಲರ ಮೇಲೆ ಕೃಪೆ ತೋರಲಿ ಎಂಬುದೇ ಅವರ ಬಳಿ ನನ್ನ ಪ್ರಾರ್ಥನೆ.